ಬಿ. ಚಂದ್ರೇಗೌಡ, ಬೆಂಗಳೂರು

*ಗಂಡ-ಹೆಂಡತಿ ಸ್ನೇಹಿತರಂತೆ ವರ್ತಿಸಬೇಕು ಅಂತಾರಲ್ಲ, ಯಾಕೆ?*



ಶತ್ರುಗಳಂತೆ ವರ್ತಿಸಿದರೆ ನೆರೆಯವರಿಗೆ ಮನರಂಜನೆ, ಟಿವಿಗೆ ಟಿಆರ್‌ಪಿ, ಇವರ ಮಾನ ಹರಾಜ್ ಆಗುವುದರಿಂದ.

ಎಚ್.ಆರ್. ದೇಸಾಯಿ, ರಾಯಚೂರು

*ಶಾರೀರಿಕವಾಗಿ ಕೊಲೆ ಮಾಡಿದವರಿಗೆ ಗಲ್ಲು ಶಿಕ್ಷೆ. ಮಾನಸಿಕವಾಗಿ ಕೊಲೆ ಮಾಡಿದವರಿಗೆ?*

ಸೀರಿಯಲ್ ಕಥೆಗಾರನ ಪಟ್ಟ.

ಮಹಾವೀರ ಕಾಸರ, ಶಿವಮೊಗ್ಗ

*ಡಿನೋಟಿಫಿಕೇಷನ್ ಒಂದು ರೀತಿಯಿಂದ ಭೂಮಿಗೆ ಹಿಡಿಯುವ ಗ್ರಹಣವೆ?*

ನಿಜ. ನೇರದಾರಿಯ ಬೆಳಕಿಗೆ ರಾಜಕಾರಣಿಯ ಆಕಾರ ಅಡ್ಡ ಬಂದಾಗ ಭೂಮಿಗೆ ಹಿಡಿಯುವ ಗ್ರಹಣ.

ಎಸ್.ಎನ್. ಮಹಾಬಲರಾವ್, ಎನ್ನಾರ್ ಪುರ

*ಸಂಸಾರದ ತಕ್ಕಡಿ ಮೇಲೇಳುತ್ತಿಲ್ಲ?*

ಶ್ರಮದ ಬೊಟ್ಟೇ ಇಟ್ಟಿಲ್ಲವಲ್ಲ!

ಜಾಕೋಬ್ ಡಿಸೋಜ, ಕುರುವಳ್ಳಿ

*ಹೃದಯಕ್ಕೂ, ಮನಸ್ಸಿಗೂ ಏನು ಸಂಬಂಧ?*



ಹೃದಯದ ವೇಗವನ್ನು ನಿಯಂತ್ರಿಸುವ ಆಕ್ಸಿಲರೇಟರೇ ಮನಸ್ಸು.

ಬಾಲಕ, ಬೀದರ್

*ಮಠ ಯಾಚನೆಯಲ್ಲಿರುವವರು ಧಾರ್ಮಿಕ ಅಧಿಕಾರಿಯಾಗಲು ಹೇಗೆ ಸಾಧ್ಯ ಗುರುಗಳೆ?*

ಸಾಧ್ಯವಿಲ್ಲ, ಇಲ್ಲವೂ ಇಲ್ಲ. ಅವರು ಧಾರ್ಮಿಕ ಸಂಸ್ಥೆಯ ಅಧಿಕಾರಿಗಳು; ಧಾರ್ಮಿಕ ಅಧಿಕಾರಿಗಳಲ್ಲ.

ಭಾರತಿ ಮಾನಗೆ, ಹೊನ್ನಾವರ

*ಸಾಲವನ್ನು ತೀರಿಸುವುದರಲ್ಲಿ ಗೃಹಿಣಿಯರೇ ಎಕ್ಸ್‌ಪರ್ಟ್. ಏಕೆ?*

ವರ-ವಧು ನಿಲ್ಲುವುದರಲ್ಲೇ ಉತ್ತರವಿದೆ; ಎಡದ ಡೆಬಿಟ್ಟಿನತ್ತ ವರನ ಗಮನ, ಬಲದ ಕ್ರೆಡಿಟ್ಟಿನತ್ತ ವಧುವಿನದು!

ಸುಶೀಲಾ ಬಿ. ರಾಮಣ್ಣ, ಬೆಂಗಳೂರು

*ನೋಡಿದ ತಕ್ಷಣ 'ನೀನ್ಯಾಕೋ, ನಿನ್ನ ಹಂಗ್ಯಾಕೋ' ಎಂದು ಹಾಡುವ ಉದ್ದೇಶ?*

ನಿಮ್ಮ ನಾಮ ಹಾಕುವ ಬುದ್ಧಿ ಕರಗತವಾದಮೇಲೆ ನಾಮದ ಬಲವೇ ಸಾಕಂತೆ.

ನಾರಾಯಣ ಯಾಜಿ, ಶಿರಾಲಿ

*ಅಪ್ಪ ಹಿಂಸೆಯ ತಂಟೆಗೆ ಹೋದವರಲ್ಲ; ಮಗನಿಗೆ ಲಾಂಗು-ಮಚ್ಚೇ ಹೊಟ್ಟೆಪಾಡು. ಹೀಗೇಕೆ?*

ಪಾಪಾಸು ಕಳ್ಳಿಯ ವಂಶವಂತೆ. ಬೇರಿನಲ್ಲಿರದ ಮುಳ್ಳು ಎಲೆ ಎಲೆಯಲ್ಲಿ.

ಕಣ್ಣೂರು ವಿ. ಗೋವಿಂದಾಚಾರಿ, ಮೈಸೂರು

*ಸರ್ಕಾರಿ, ಖಾಸಗಿ ಸಂಸ್ಥೆಗಳಿಗೆ ರವಿವಾರ ರಜೆ ಇರುವಂತೆ ಮದ್ಯದಂಗಡಿಗಳಿಗೂ 1 ದಿನ ರಜೆ ನೀಡಿದರೆ?*

ಹಿಂದಿನ ರಾತ್ರಿ ಟೈಟ್ ಆದವನು ರಜೆಯ ಮರುದಿನ ಏಳುತ್ತಾನೆ.

ದೀಪಾ ವಿ. ಮಹಾಲೆ, ಸಾಂಬ್ರಾಣಿ

*ಸಾಹಿತ್ಯ ನೀರಿನಂತೆ ಏಕೆ ಪರಿಶುದ್ಧವಾಗಿರಬೇಕು?*

ಕೊಳಕು ಸಾಹಿತ್ಯದಿಂದ ಸೋಷಿಯಲ್ ಇಂಫೆಕ್ಷನ್ ಆಗುವುದರಿಂದ!

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ

*ಸರ್, ರಾವಣನಿಗೆ ಸೀತೆಯನ್ನು ಕದ್ದೊಯ್ಯುವ ಆಲೋಚನೆ ಏಕೆ ಬಂತು?*

ರಾಜಾರೋಷವಾಗಿಯೇ ಕರೆದೊಯ್ಯೋಣವೆಂದರೆ ಇಮ್ಮಿಗ್ರೇಷನ್‌ನವರು ಸೀತೆಗೆ ವೀಸಾ ಕೊಡಲಿಲ್ಲವಂತೆ.

ಪಿ.ಜೆ. ರಾಘವೇಂದ್ರ, ಮೈಸೂರು

*ಟಿ.ಎನ್. ಸೀತಾರಾಮರ ಸೀರಿಯಲ್ ಆರಂಭವಾಗುತ್ತಿದ್ದಂತೆ ಟಿ.ವಿ.ಯ ಬೆಲೆ ಏರಿತಂತೆ?*

ಬೆಲೆ ಅಲ್ಲ. 'ಮ' ಇಂದಲೇ ಶುರುವಾಗುವ ಅವರ ಸೀರಿಯಲ್ಲಿಂದ ಏರಿದ್ದು 'ಮ' ಇಂದಲೇ ಶುರುವಾಗುವ ಮೌಲ್ಯ!

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಸತಿಸಹಗಮನದಂತೆ ಈಗಿನ ಕಾಲದಲ್ಲಿ ಪತಿಸಹಗಮನ ಶುರುವಾದರೆ ಏನಾದೀತು?*

ಅದಕ್ಕೇ ಮೀಸಲಾದ 'ಚಿತೆ ಟಿವಿ 24/7' ಆರಂಭವಾಗಿ ದಿನವಿಡೀ ಹಾಹಾಕಾರ ತೋರಿಸೀತು.

ರಾಜೇಂದ್ರ ಎನ್. ಮಾಗಲ್, ಸಕಲೇಶಪುರ

*ಅಂದು 'ಕಾಯಕವೇ ಕೈಲಾಸ'. ಇಂದು 'ಕಾಸಿದ್ರೆ ಕೈಲಾಸ'. ಮುಂದೆ?*

ಕಾಯಕಕ್ಕಾಗಲಿ, ಕಾಸಿಗಾಗಲಿ, ಆಧಾರ್ ಕಾರ್ಡ್ ಇದ್ದರೆ ಮಾತ್ರ ಕೈಲಾಸ.

ಅಮರಯ್ಯಾ ಪತ್ರಿಮಠ, ಸುರಪುರ

*ಪುಸ್ತಕಗಳು ಒಳ್ಳೆಯ ಸ್ನೇಹಿತರಾದರೆ, ಲೇಖನಿ?*

ಸ್ನೇಹಿತರ ಫ್ಯಾಮಿಲಿ ಫ್ರೆಂಡ್.

ಫಾಲನೇತ್ರ, ಶಿರಸಿ

*ಗೋಮುಖ ವ್ಯಾಘ್ರವು ಹುಲ್ಲು ತಿನ್ನುವುದೋ ಅಥವ ಮಾಂಸ ಭಕ್ಷಿಸುವುದೋ?*

ಬಾಡೂಟವನ್ನು ಪತ್ರೊಡೆ ಸೊಪ್ಪಿನಲ್ಲಿ ಸುತ್ತಿಕೊಂಡು ತಿನ್ನುವುದು.

ನರಸಿಂಹ ಪೈ, ಕಾಸರಕೋಡ

*ಗೋವನ್ನು 'ಕಾಮಧೇನು' ಎಂದು ಕರೆಯುತ್ತಾರೆ. ಏಕೆ?*



ಏಕೆಂದರೆ ಅದರ ದೇಹದಿಂದ ಹೊರಡುವ ಎಲ್ಲ ಉತ್ಪನ್ನಗಳ ಬಳಕೆಗೂ ಕಾಮಾ ಇದೆ, ಫುಲ್‌ಸ್ಟಾಪ್ ಇಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಈ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದ ವಸ್ತು ಯಾವುದು ಸಾರ್?*

ನಿರಾತಂಕವಾದ ಉಸಿರಾಟ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*ವ್ಯವಸಾಯ ಎಂಬುದರ ನಿಜಾರ್ಥವೇನು ಸಾರ್?*

ವ್ಯ- ವ್ಯವಧಾನದಿಂದ; ವ - ವರ್ಷವಿಡೀ; ಸಾ - ಸಾಗುವಳಿಯ; ಯ - ಯಜನ.

■ ರಾಮ್